SRI H. M. CHANNABASAPPA (Minister for Health).—

(*a*) —

1. Victoria Hospital, Bangalore.
2. Bowring & Lady Cahrzon Hospital, Bangalore.
3. Minto Opthalmic Hospital, Bangalore,
4. Government Wenlock Hospital, Mangalore.
5. Government Wellesly T. B. Sanatorium, Bellary.
6. Government Lady Gochen Hospital, Mangalore.
7. Mc-Gann Hospital, Shimoga.
8. King Edward Memorial Hospital, Mudhol, Bijapur Dist.
6. Crawford Hospital, Sakleshpur, Hassan District.
10 Lady Willingdon T. B. Demonstration & Training Centre, Bangalore.
11. Prince of Wales Hospital, Jamkhandi.

(*b*) Yes.

(*c*) and (*d*) Government have decided that the time honoured names of certain major Institutions and "donor" Institutions, need not be changed.

ಶ್ರೀ ಪಿ. ಎಂ. ಬಾಂಗಿ.—ರಾಜ್ಯ ಮಟ್ಟದ ಹಾಗೂ ಜಿಲ್ಲಾ ಮಟ್ಟದ ಆಸ್ಪತ್ರೆಗಳಿಗೆ ಇರುವ ವ್ಯತ್ಯಾಸ ಏನು ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಸುಸ್ಪಷ್ಟವಾದ ಡೆಫಿನಿಷನ್ ಇಲ್ಲ, ಆದರೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಇನ್‌ಸ್ಟಿಟ್ಯೂಷನ್ಸ್ ಏನು ಇವೆ ಅವುಗಳಿಗೆ ಸಾಧಾರಣವಾಗಿ ಮೇಜರ್ ಇನಿಸ್ಟಿಟ್ಯೂಟ್ಸ್ ಎಂದೂ ಜಿಲ್ಲಾ ಮಂತ್ರಿ ತಾಲ್ಲೂಕುಗಳಲ್ಲಿ ಇರತಕ್ಕ ಇನಿಸ್ಟಿಟ್ಯೂಟ್ಸ್‌ಗಳಿಗೆ ಮೈನರ್ ಇನ್‌ಸ್ಟಿಟ್ಯೂಷನ್ ಎಂದು ಸರ್ವೆ ಸಾಧಾರಣವಾಗಿ ಇಟ್ಟುಕೊಂಡಿದ್ದೇವೆ.

ಶ್ರೀ ಎಂ. ಎಸ್ ಕೃಷ್ಣನ್.—ತಮ್ಮ ಉತ್ತರದಲ್ಲಿ ಹೆಸರು ಬದಲಾವಣೆ ಮಾಡುವುದಿಲ್ಲ ಎಂದು ಹೇಳಿದ್ದೀರಿ. ಸಾಂಪ್ರದಾಯಿಕವಾಗಿ ರಸ್ತೆಗಳಿಗೆ ಹಿಂದೆ ಇದ್ದಂತೆ ಹೆಸರುಗಳನ್ನು ಬದಲಾವಣೆ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಹಾಗೆ ಇರಬೇಕಾದರೆ, ಇವುಗಳನ್ನು ಬದಲಾವಣೆ ಮಾಡುವ ಬಗ್ಗೆ ಯೋಜನೆ ಮಾಡುತ್ತಿರಾ ?

ಶ್ರೀ ಹೆಚ್. ಎಂ, ಚನ್ನಬಸಪ್ಪ.— ಆರೋಗ್ಯ ಇಲಾಖೆಯಲ್ಲಿ ನಾವು ತೆಗೆದುಕೊಂಡಿರತಕ್ಕ ತೀರ್ಮಾನವನ್ನು ನಾನು ತಿಳಿಸಿದ್ದೇನೆ.

Breach of Horthi Tank

105 SRI J. L. KABADE (Ballolli)—Will the Minister of State for Minor Irrigation and Protocol be pleased to state :—

(*a*) whether payment in respect of losses incurred to the land owners on the down stream side of the Horthi Tank, which is breached, has been paid ;

(*b*) whether it is a fact that a representation in this regard was made to Chief Minister by the concerned Legislator ;

(*c*) what is the amount of loss estimated and the disbursement made so far to this person affected ?

SRI H. C. SRIKANTAIAH (Minister of State for Minor Irrigation and Protocol).—

(*a*) No.

(*b*) Yes.

(*c*) Rs. 11,700 and nil respectively.

ಶ್ರೀ ಜೆ. ಎಲ್. ಕಬಾಡೆ.—ಹೊರ್ತಿ ಕೆರೆ ಏತಕ್ಕೆ ಒಡೆದು ಹೋಯಿತು ?

† ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅಲ್ಲಿ ಒಹಳ ಹೆಚ್ಚಿನ ಮಳೆ ಬಂದು ನೀರಿನ ಒತ್ತಡ ಜಾಸ್ತಿಯಾಗಿ ಕೆರೆ ಒಡೆದು ಹೋಯಿತು.

ಶ್ರೀ ಜೆ. ಎಲ್ ಕಬಾಡೆ.—ಆರು ವರ್ಷಗಳ ಹಿಂದೆ ಕಟ್ಟಿದ್ದ ಕೆರೆ ಮೂರು ವರ್ಷಗಳಲ್ಲಿಯೇ ಏತಕ್ಕೆ ಒಡೆದುಹೋಯಿತು ? ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನು ಕ್ರಮ ತೆಗದುಕೊಂಡಿದ್ದಿರಿ ?

ಶ್ರೀ ಹೆಚ್. ಸಿ ಶ್ರೀಕಂಠಯ್ಯ.—ಕೆರೆ ಒಡೆದುಹೋಗಿದ್ದು ಅತಿವೃಷ್ಟಿಯಿಂದ ಎಂದು ನನ್ನ ಹತ್ತಿರ ಮಾಹಿತಿ ಇದೆ.

ಶ್ರೀ ಟಿ. ಎಂ. ಮಂಜುನಾಥ್.—ಅತಿವೃಷ್ಟಿಯಿಂದ ಒಡೆದುಹೋಯಿತು ಎಂದು ಹೇಳಿದಿರಿ. ಎಷ್ಟು ಇಂಚು ಮಳೆ ಆಯಿತು ? ಕೆರೆ ಕಟ್ಟುವ ಮುನ್ನ ತಜ್ಞರು ಒಪ್ಪಿಗೆ ಪಡೆಯಲಾಗಿತ್ತೆ ? ಆ ಬಗ್ಗೆ ಪೂರ್ಣ ಮಾಹಿತಿಯನ್ನು ಸಭೆಗೆ ಕೊಡುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ನನ್ನ ಹತ್ತಿರ ಪೂರ್ಣ ಮಾಹಿತಿ ಇಲ್ಲ ; ತರಿಸಿಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಸ್ವಾಮಿ, ಕೆರೆ ಒಡೆಯಲುವುದಕ್ಕೆ ಕಾರಣ ಏನು ? ಕೆರೆ ಕಟ್ಟಿದ ಎಷ್ಟು ವರ್ಷಗಳ ಮೇಲೆ ಒಡೆಯಿತು ? ಟೆಕ್ನಿಕಲ್ ರಿಪೋರ್ಟ್ ಏನಾದರೂ ಇದೆಯೆ ? ಅದ್ಯಾವುದೂ ವಿವರ ಇಲ್ಲದೇ ಇದ್ದರೆ ಈ ಪ್ರಶ್ನೆಯನ್ನು ತಡೆಹಿಡಿಯಬೇಕು.

ಶ್ರೀ ಹೆಚ್. ಸಿ ಶ್ರೀಕಂಠಯ್ಯ.—ಪ್ರಶ್ನೆ ಇರತಕ್ಕುದ್ದು ನಷ್ಟ ಹೊಂದಿದ ಭೂ ಮಾಲೀಕರಿಗೆ ಪರಿಹಾರ ಕೊಡುವ ಬಗ್ಗೆ ; ಕಾರಣ ಕೇಳಿದ್ದರೆ ಕೂಲಂಕಷವಾಗಿ ಕೊಡುತ್ತಿದ್ದೆ.

ಅಧ್ಯಕ್ಷರು.—ಉಪ ಪ್ರಶ್ನೆಗಳು ಬಂದಮೇಲೆ ಇದೆಲ್ಲಾ ವಿವರಗಳನ್ನು ಕೇಳಬೇಕಾಗಿ ಬರುತ್ತದೆ. ಆದುದ್ದರಿಂದ ಈ ಪ್ರಶ್ನೆಯನ್ನು ತಡೆಹಿಡಿದಿದ್ದೇನೆ.

Payments of occupancy price

108. SRI S. M. SHEERNALY CHANDRASHEKAR (Hosanagar).—Will the Minister for Revenue be pleased to state :—

(*a*) the rate of interest being charged by the State Land Development Banks in respect of the amount paid to the Government on behalf of the tenants ;

(*b*) whether it is not a fact that tenants are required to pay more interest than he is expected to pay according to Land Reforms Act ;

(*c*) whether Government intend to create a separate fund to pay the land owners on behalf of the tenants ;